ಕುವೆಂಪು ವಿಶ್ವವಿದ್ಯಾಲಯ
ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451, ಶಿವಮೊಗ್ಗ, ಕರ್ನಾಟಕ.
Phone No: 08282-256166, mob: 7022254997 ಇ-ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in

**Re-Accredited by NAAC with 'A' Grade, Ranked 73rd Place in NIRF- 2019 and Secured 45th Place in SCIMAGO Institutional Rankings**

ಸಂಖ್ಯೆ: ಕುವಿ/ಪವಿ/ಯುಜಿ-2/76556/2019 ದಿನಾಂಕ:18-11-2019

## ಸುತ್ತೋಲೆ

**ವಿಷಯ :** ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಪದವಿ ಪರೀಕ್ಷೆಗಳು ನಡೆಯುತ್ತಿರುವ ಕುರಿತು.

****

ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳಲ್ಲಿ ಅಕ್ಟೋಬರ್/ನವೆಂಬರ್-2019ರ ಸ್ನಾತಕ (UG) ಪರೀಕ್ಷೆಗಳು ಪ್ರಾರಂಭವಾಗಿರುತ್ತದೆ ಈ ಸಮಯದಲ್ಲಿ ಕುಲಸಚಿವರು (ಪರೀಕ್ಷಾಂಗ) ಇವರು ಕೆಲವು ಕಾಲೇಜುಗಳಿಗೆ ಭೇಟಿ ನೀಡಿದ್ದು, ಪರೀಕ್ಷೆಗಳು ಸುಗಮವಾಗಿ ಹಾಗೂ ವ್ಯವಸ್ಥಿತವಾಗಿ ನಡೆಯುತ್ತಿರುವುದು ಕಂಡುಬಂದಿರುತ್ತದೆ. ಇನ್ನು ಕೆಲವು ಕಾಲೇಜುಗಳಲ್ಲಿ ಸಿ.ಸಿ ಕ್ಯಾಮರಾಗಳನ್ನು ಅಳವಡಿಸಿ ಪರೀಕ್ಷೆಗಳನ್ನು ನಡೆಸುತ್ತಿರುವುದು ಕಂಡು ಬಂದಿದ್ದು, ಇದು ತುಂಬ ಶ್ಲಾಘನೀಯವಾಗಿರುತ್ತದೆ.

ಆದ್ದರಿಂದ, ಈಗಾಗಲೇ ಕೆಲವು ಕಾಲೇಜುಗಳಲ್ಲಿ ಸಿ.ಸಿ ಕ್ಯಾಮರಾಗಳನ್ನು ಅಳವಡಿಸಿ ನಡೆಸಿರುವ ಪರೀಕ್ಷೆಗಳ ವಿಡಿಯೋ ಫುಟೇಜ್ (Footage)ಗಳನ್ನು ಪರೀಕ್ಷೆ ಮುಕ್ತಾಯವಾದ ಮರುದಿನವೇ ಈ ಕಛೇರಿಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ಹಾಗೂ ಸಿ.ಸಿ ಕ್ಯಾಮರಾಗಳನ್ನು ಅಳವಡಿಸದೇ ಇರುವ ಕಾಲೇಜುಗಳಲ್ಲಿ ಮುಂಬರುವ ಪರೀಕ್ಷೆಗಳಿಗೆ ಸಿ.ಸಿ ಕ್ಯಾಮರಾಗಳನ್ನು ಕಡ್ಡಾಯವಾಗಿ ಅಳವಡಿಸುವ ವ್ಯವಸ್ಥೆಯನ್ನು ಮಾಡಿಕೊಳ್ಳುವಂತೆ ತಿಳಿಸಲಾಗಿದೆ.

ಕುಲಸಚಿವರು(ಪರೀಕ್ಷಾಂಗ)
**ಕುವೆಂಪು ವಿಶ್ವವಿದ್ಯಾನಿಲಯ.**
**ಜ್ಞಾನಸಹ್ಯಾದ್ರಿ.**
**ಶಂಕರಘಟ್ಟ - 577 451.**

**ಗೆ,**

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಗಳು:**

1. ಕಂಪ್ಯೂಟರ್ ವಿಭಾಗ, (ಪರೀಕ್ಷಾಂಗ) ಇವರಿಗೆ, ಸಂಬಂಧಿಸಿದ ಕಾಲೇಜುಗಳಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
2. ಕಛೇರಿ ಪ್ರತಿ.

B.Ed., Circular